**<u>ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,</u>**
**<u>ಚನ್ನಪಟ್ಟಣ.</u>**

<u>ಸಿಸಿ:**4604/2022**</u>

| | | |
|---|---|---|
| **ಪಿರ್ಯಾದುದಾರರು** | ಃ | ಶ್ರೀ.ಮಹೇಶ್ ಗೌಡ.ಸಿ.ಎಂ,<br>ಬಿನ್ ಕೆ.ಮಾದೇಗೌಡ,<br>ವಯಸ್ಸು **43** ವರ್ಷ,<br>ವಾಸಃ ಹುನುಮಂತನಗರ,<br>ಬಿ.ಎಂ.ರಸ್ತೆ,<br>ಚನ್ನಪಟ್ಟಣ ಟೌನ್,<br>ರಾಮನಗರ ಜಿಲ್ಲೆ. |

-ವಿರುದ್ಧ-

| | | |
|---|---|---|
| **ಆರೋಪಿ** | ಃ | ಶ್ರೀಮತಿ.ಪದ್ಮಾವತಿ.ಎಂ.ಸಿ,<br>ಕೋಂ ರಾಮಮೂರ್ತಿ. ಎಂ.,<br>ವಯಸ್ಸು 35 ವರ್ಷ,<br>ವಾಸ ಃ ದೊಡ್ಡಮಳೂರು ಗ್ರಾಮ,<br>ಮಳೂರು ಹೋಬಳಿ,<br>ಚನ್ನಪಟ್ಟಣ ತಾಲ್ಲೂಕು,<br>ರಾಮನಗರ ಜಿಲ್ಲೆ. |

**<u>ಆಪಾದನೆ</u>**

ಆರೋಪಿ ಮತ್ತು ಪಿರ್ಯಾದುದಾರರು ಸುಮಾರು ವರ್ಷಗಳಿಂದ ಪರಿಚಯಸ್ಥರಾಗಿರುತ್ತೀರಿ. ಈ ಪರಿಚಯದ ಮೇರೆಗೆ ಆರೋಪಿಯಾದ ನೀವು ಪಿರ್ಯಾದುದಾರರನ್ನು **2021** ನೇ ಸಾಲಿನ ಫೆಬ್ರವರಿ ತಿಂಗಳ ಮೊದಲನೇ ವಾರದಲ್ಲಿ ಭೇಟಿಯಾಗಿ ತಮ್ಮ ಕೈ ಸಾಲ ತೀರಿಸಲು ಹಾಗೂ ಗೃಹಕೃತ್ಯದ ಬಳಕೆಗಾಗಿ ತುರ್ತಾಗಿ ರೂ.**4,00,000/-** ಗಳ ಹಣದ ಅವಶ್ಯಕತೆ ಇದೆ ಎಂದು ಹೇಳಿರುತ್ತೀರಿ. ಪಿರ್ಯಾದಿದಾರರು ನಿಮ್ಮ ಮಾತನ್ನು ನಂಬಿ ತಮ್ಮ ಬ್ಯಾಂಕ್ ಖಾತೆಯಿಂದ ದಿನಾಂಕಃ**17.02.2021** ರಂದು **3** ಲಕ್ಷಗಳನ್ನು ಡ್ರಾ ಮಾಡಿ, ಹಾಗೂ ಮನೆಯಲ್ಲಿ ಇಟ್ಟುಕೊಂಡಿದ್ದ ರೂ.**1,00,000/-** ಗಳನ್ನು ಒಟ್ಟು ರೂ.**4,00,000/-** ಗಳನ್ನು **2021** ನೇ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಪಿರ್ಯದಿದಾರರ ಮನೆಯಲ್ಲಿ

ಆರೋಪಿಯಾದ ನೀವು ನಗದನ್ನು ಪಡೆದುಕೊಂಡಿರುತ್ತೀರಿ ಹಗೂ ಸದರಿ ಹಣವನ್ನು ಮುಂದಿನ **1** ವರ್ಷ ಆರು ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ, ತದನಂತರ ಪಿರ್ಯಾದಿದಾರರು **1** ವರ್ಷ **6** ತಿಂಗಳ ವಾಯಿದೆ ಮುಗಿದ ನಂತರ ಆರೋಪಿಯಾದ ನಿಮ್ಮನ್ನು ಸದರಿ ಸಾಲದ ಹಣವನ್ನು **2022** ನೇ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಕೇಳಲಾಗಿ ಆರೋಪಿಯಾದ ನೀವು ನನ್ನ ಬಳಿ ಈಗ ನಗದು ಹಣ ಇರುವುದಿಲ್ಲವೆಂದು ತಿಳಿಸಿ, ದಿನಾಂಕಃ **30.08.2022** ರಂದು ಚನ್ನಪಟ್ಟಣ ಶಾಖೆಯ ಫೆಡರಲ್ ಬ್ಯಾಂಕ್ ನ ಚೆಕ್ ಸಂಖ್ಯೆಃ **043260** ರಲ್ಲಿ **ರೂ.4,00,000/-,** ಅನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ಹೇಳಿರುತ್ತೀರಿ, ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಚೆಕ್ಕನ್ನು ದಿನಾಂಕಃ **01.09.2022** ರಂದು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಕರ್ನಾಟಕ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು **"ಸಾಕಷ್ಟು ಹಣ ಇಲ್ಲ"** ಎಂಬ ಹಿಂಬರಹದೊಂದಿಗೆ ಚೆಕ್‌ನ್ನು ದಿನಾಂಕಃ**02.09.2022** ರಂದು ವಾಪಸ್ಸು ನೀಡಿರುತ್ತಾರೆ. ತದನಂತರ ಪಿರ್ಯಾದುದಾರರು ಈ ವಿಷಯವನ್ನು ತಿಳಿಸಿ ಹಣ ವಾಪಸ್ಸು ಮಾಡುವಂತೆ ಕೇಳಿದಾಗ ಆರೋಪಿಯಾದ ನೀವು ಇಲ್ಲ ಸಲ್ಲದ ಸಬೂಬು ಹೇಳುತ್ತಾ ಕಾಲಹರಣ ಮಾಡುತ್ತಾ ಬಂದಿರುತ್ತೀರಿ ಹಾಗೂ ಯಾವುದೇ ಹಣ ನೀಡದ ಕಾರಣ, ಅವರು ನಿಮಗೆ ವಕೀಲರ ಕಾನೂನು ತಿಳುವಳಿಕೆ ಪತ್ರವನ್ನು ದಿಃ **01.10.2022** ರಂದು ನೊಂದಾಯಿತ ಅಂಚೆ ಮತ್ತು ತ್ವರಿತ ಅಂಚೆ ಮೂಲಕ ನೀಡಿದ್ದು, ಆರೋಪಿಯಾದ ನೀವು ತಿಳುವಳಿಕೆ ಪತ್ರವನ್ನು ದಿನಾಂಕಃ**08.10.2022** ರಂದು ಪಡೆದುಕೊಂಡರು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.**138** ಎನ್.ಐ. ಆಕ್ಟ್ ಹಾಗೂ ಐ.ಪಿ.ಸಿ **420** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**1.** ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ **?**

ಉತ್ತರ ಃ

**2.** ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ **?**

ಉತ್ತರ ಃ

**(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಓದಿ ಹೇಳಲಾಗಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ಆಪಾದನೆ ಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತನು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ದೃಢೀಕರಿಸುತ್ತೇನೆ.)**

ದಿನಾಂಕಃ **17.02.2024.**

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಚನ್ನಪಟ್ಟಣ.

ಫಿರ್ಯಾದುದಾರರಾದ ಶ್ರೀ ಎಂ.ಹೇಮಂತ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಸುಮಾರು ವರ್ಷಗಳಿಂದ ಪರಿಚಯಸ್ಥರು ಹಾಗೂ ಸ್ನೇಹಿತರಾಗಿದ್ದು, ಈ ಪರಿಚಯದ ಮೇರೆಗೆ ಆರೋಪಿಯಾದ ನೀವು ತನ್ನ ಮನೆ ನಿರ್ಮಾಣ ಮಾಡುವ ಸಲುವಾಗಿ ಹಣದ ಅವಶ್ಯಕತೆಯಿದೆ ಎಂದು ಪಿರ್ಯಾದುದಾರರನ್ನು ಸಂಪರ್ಕಿಸಿ **ರೂ.1,60,000/-** ಗಳನ್ನು ಸಾಲ ಕೇಳಲಾಗಿ ಅದಕ್ಕೆ ಪಿರ್ಯಾದುದಾರರು ಒಪ್ಪಿ ದಿನಾಂಕ **10.08.2022** ರಂದು ಆರೋಪಿಯಾದ ನೀವು ಪಿರ್ಯದುದಾರರ ಮನೆಯಲ್ಲಿ **ರೂ,1,60,000/-** ಹಣವನ್ನು ಸಾಲವಾಗಿ ಪಡೆದಿದ್ದು ಹಾಗೂ ಸದರಿ ಹಣವನ್ನು ಪಿರ್ಯಾದುದಾರರಿಗೆ **4** ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**3.** ಫಿರ್ಯಾದುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತದನಂತರ ಅವರು ಆರೋಪಿಯಾದ ನಿಮ್ಮನ್ನು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ಹಣವನ್ನು ವಾಪಸ್ ನೀಡದೇ ಸಬೂಬು ಹೇಳಿಕೊಂಡು ಕಾಲ ಕಳೆದಿರುತ್ತೀರಿ. ಪಿರ್ಯಾದಿದಾರರು ಆರೋಪಿಯಾದ ನಿಮ್ಮನ್ನು ಪದೇ ಪದೇ ಸದರಿ ಹಣವನ್ನು ಕೇಳಿದಾಗ ಆರೋಪಿಯಾದ ನೀವು ಸದರಿ ಹಣದ ಮರುಪಾವತಿಗೆ ಸಾಲದ ಭದ್ರತೆಗಾಗಿ ದಿನಾಂಕಃ **12.12.2022** ರಂದು ಚನ್ನಪಟ್ಟಣ ಶಾಖೆಯ ಕರ್ನಾಟಕ ಬ್ಯಾಂಕಿನ ಚೆಕ್ ಸಂಖ್ಯೆಃ **612490** ರಲ್ಲಿ **ರೂ.1,60,000/-/-,**

ಅನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನೀಡಿ ನಗದೀಕರಣಗೊಳಿಸಿ ಕೊಳ್ಳುವಂತೆ ಹೇಳಿರುತ್ತೀರಿ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

**4.** ಫಿರ್ಯಾದುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಚೆಕ್ಕನ್ನು ದಿನಾಂಕ **16.12.2022** ರಂದು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಬರೋಡಾ ಬ್ಯಾಂಕ್‌ಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**ಸಾಕಷ್ಟು ಹಣವಿಲ್ಲ**" ಎಂಬ ಹಿಂಬರಹದೊಂದಿಗೆ ಚೆಕ್‌ನ್ನು ದಿನಾಂಕ.**16.12.2022** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ಈ ವಿಷಯವನ್ನು ತಿಳಿಸಿ ಹಣ ವಾಪಸ್ಸು ಮಾಡುವಂತೆ ಕೇಳಿಕೊಂಡರೂ ನೀವು ಯಾವುದೇ ಹಣ ನೀಡದ ಕಾರಣ, ಅವರು ನಿಮಗೆ ವಕೀಲರ ಕಾನೂನು ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆ ಮೂಲಕ ದಿಃ **05.01.2023** ರಂದು ನೀಡಿದ್ದು, ಸದರಿ ನೋಟಿಸ್ ದಿನಾಂಕ **07.01.2023** ರಂದು ಆರೋಪಿಯ ತಿಳುವಳಿಕೆಗೆ ಬಂದಿದ್ದು, ಸದರಿ ಆರ್.ಪಿ.ಎ.ಡಿ ನೋಟಿಸ್ ನ್ನು ಸ್ವೀಕರಿಸಲು ತಿರಸ್ಕರಿಸಿರುತ್ತಾರೆ ಮತ್ತು ದಿನಾಂಕ.**09.01.2023** ರಂದು ಸ್ಪೀಡ್ ಪೋಸ್ಟ್ ಆರೋಪಿಗೆ ತಲುಪಿದ್ದು ಆರೋಪಿಯಾದ ನೀವು ಪಿರ್ಯಾದಿದಾರರಿಗೆ ನೀಡಬೇಕಾದ ಚೆಕ್ಕಿನ ಹಣವನ್ನು ನೀಡದೆ ಹಾಗೂ ನೋಟಿಸ್ಸಿಗೆ ಯಾವುದೇ ಪ್ರತ್ಯುತ್ತರವನ್ನು ನೀಡದೇ ಉದಾಸೀನ ತೋರಿರುತ್ತೀರಿ. ಆದಕಾರಣ ನೀವು ಕಲಂ.**138,** ಎನ್.ಐ ಆಕ್ಟ್ ಮತ್ತು ಐ.ಪಿ.ಸಿ **420** ರಡಿಯಲ್ಲಿ ಶಿಕ್ಷಾರ್ಹ

ಅಪರಾಧವನ್ನು ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ